<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

ಸಿ.ಸಿ. ನಂಃ 1004/2016 ಸಿಡಬ್ಲೂ: 6 ಪಿಡಬ್ಲೂ: 6

ಪ್ರಮಾಣವಚನ ಬೋಧಿಸಲಾಯಿತು ದಿಃ 06-03-2026

ಹೆಸರು : ಈಜ್ಜಮ್ಮ

ಗಂಡ ಹೆಸರು : ದೇವೀಂದ್ರಪ್ಪ

ವಯಸ್ಸು : 41 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಬಟಗೇರಾ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1 ಗೊತ್ತು. ಆರೋಪಿತನು ಗೊತ್ತು. ಆರೋಪಿತರು ಮತ್ತು ಚಾ ಸಾ 1 ನಡುವೆ ಆಗಿದೆ ಎನ್ನಲಾದ ತಂಟೆಯ ಬಗ್ಗೆ ನನಗೆ ಗೊತ್ತಿಲ್ಲ. ಆಗ ಆ ದಿನ ನಾನು ಕೆಲಸಕ್ಕೆ ಹೋಗಿ ಸಾಯಂಕಾಲ ಮನೆಗೆ ಬಂದಿದ್ದು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>**ವಾಟೀಸವಾಲುಃ**</u> ಮಾನ್ಯ ಸ.ಸ.ಅ ರವರಿಂದ:

ದಿ.07-06-2016 ರಂದು ರಾತ್ರಿ 08-30 ಗಂಟೆಗೆ ಚಾ ಸಾ 5 ಮತ್ತು 6 ರವರು ಚಾ ಸಾ 1 ರವರ ಮನೆಯ ಮುಂದೆ ನಿಂತಾಗ ಆರೋಪಿತರು ಬಂದು ಹೇ ಎಲ್ಲಾ ರಂಡಿ ಮಗನೆ ಅಂತಾ ಮನೆಯ ಹೊರಗಡೆ ಬಾ ಎಷ್ಟು ದಮ್ ಅದಾ ನೋಡಿಕೊಳ್ಳುತೇನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಿಲ್ಲ. ಆಗ ಚಾ ಸಾ 1 ರವರು ಯಾಕೆ ಬೈಯುತ್ತಿದ್ದೀಯಾ ಅಂತಾ ಕೇಳಿದರು ಎಂದರೆ ಸರಿಯಿಲ್ಲ. ಆಗ 3 ನೇ ಆರೋಪಿತನು ಕಡಚಿ ತಗೆದುಕೊಂಡು ಚಾ ಸಾ 1 ರವರ ಎಡ ಹಣೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಎಂದರೆ ಸರಿಯಿಲ್ಲ. ಅದೇ ರೀತಿ ಬಡಿಗೆಯನ್ನು ಹಿಡಿದುಕೊಂಡು ಚಾ ಸಾ 1 ರವರ ಹೊಟ್ಟೆಗೆ ಮತ್ತು ಬೆನ್ನಿಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಎಂದರೆ ಸರಿಯಿಲ್ಲ. 2 ನೇ ಆರೋಪಿತನು ಚಾ ಸಾ 1 ರವರಿಗೆ ಕೈಯಿಂದ ಹೊಡೆದು ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ

ಸರಿಯಿಲ್ಲ.  ಆಗ ನಾನು ಮತ್ತು ಚಾ ಸಾ 5 ರಿಂದ 7 ರವರು ಜಗಳ ಬಿಡಿಸಿರುತ್ತೇನೆ ಎಂದರೆ ಸರಿಯಿಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿ ಪಿ 5 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ   ವಕೀಲರಿಂದ:

ಪಾಟಿ ಸವಾಲು ಇರುವುದಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**